ಮಾಡಿದ್ದೀರಿ, ಅವರು ಅದಕ್ಕೆ ಉತ್ತರವನ್ನು ಹೇಳಿದ್ದಾರೆ. ಮತ್ತೆ ಮತ್ತೆ ಕೇಳುತ್ತೀರಲ್ಲಾ? ಅಭಯಚಂದ್ರ ಜೈನ್‌ರವರು ಪ್ರಸ್ತಾಪ ಮಾಡಿ.

ಶ್ರೀ ನೆ.ಲ. ನರೇಂದ್ರಬಾಬು: ಉತ್ತರ ಸ್ಪಷ್ಟವಾಗಿರಲಿಲ್ಲ. ಅದಕ್ಕೆ ನಾನು ಕೇಳುತ್ತಿರುವುದು. ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು ಎಂದ ಹಾಗೆ ಇವರ ಗೊಂದಲದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳೇ ಬಂದಿಲ್ಲ.

ಅಧ್ಯಕ್ಷರು: ನಾನು ಅಭಯಚಂದ್ರ ಜೈನ್‌ರವರನ್ನು ಕರೆದಿದ್ದೇನೆ. ಆಯಿತು. ನಿನ್ನೆ ಕೂಡ ಅದನ್ನೇ ಹೇಳಿದ್ದೀರಿ, ಅಭಯಚಂದ್ರ ಜೈನ್ ನೀವು ಪ್ರಸ್ತಾಪ ಮಾಡಿ.

ಆ) ವಿಷಯ : ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ವಿವಿಧ ಬೇಡಿಕೆಗಳ ಬಗ್ಗೆ.

ಶ್ರೀ ಕೆ. ಅಭಯಚಂದ್ರ ಜೈನ್ (ಮೂಡಬಿದರೆ): ಮಾನ್ಯ ಶಿಕ್ಷಣ ಸಚಿವರಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ವಿವಿಧ ಬೇಡಿಕೆಗಳ ಬಗ್ಗೆ ಪರಿಶೀಲಿಸಲು ನೇಮಕ ಮಾಡಲಾಗಿದ್ದ ಪ್ರೊಫೆಸರ್ ಎಲ್.ಆರ್. ವೈದ್ಯನಾಥನ್ ಸಮಿತಿಯು ನೀಡಿರುವ ವರದಿಯನ್ನು ಸರ್ಕಾರ ಒಪ್ಪಿಕೊಂಡು ದಿನಾಂಕ: 30–08–2007 ರಂದು ಆದೇಶ ಹೊರಡಿಸಿದ್ದರೂ ಸಹ ಇದುವರೆಗೆ ಅನುಷ್ಠಾನಕ್ಕೆ ಬಂದಿರುವುದಿಲ್ಲ. ಈ ಬಗ್ಗೆ ದಿನಾಂಕ: 08–07–2010 ರಂದು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇವೆ.

ಶ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಶ್ರೀಯುತ ಅಭಯಚಂದ್ರ ಜೈನ್‌ರವರು ನಮ್ಮ ದೈಹಿಕ ಶಿಕ್ಷಕರ ಕುರಿತಂತೆ ಇರುವ ಸಮಸ್ಯೆಗಳನ್ನು ಉಲ್ಲೇಖ ಮಾಡುವಂತಹ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ.

ದೈಹಿಕ ಶಿಕ್ಷಕರ ಸಂಘದ ಪದಾಧಿಕಾರಿಗಳ ಜೊತೆಯಲ್ಲಿ ನಿನ್ನೆಯೂ ಸಹ ನಾನು ಮಾತನಾಡಿದ್ದೇನೆ. ನಾವು ವೈದ್ಯನಾಥನ್ ಸಮಿತಿಯ ವರದಿಯನ್ನು ಒಪ್ಪಿಕೊಂಡ ನಂತರದಲ್ಲಿ ಅವರಿಗೆ ಅನೇಕ ರೀತಿಯ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. ದೈಹಿಕ ಶಿಕ್ಷಣಕ್ಕೆ ಸಂಬಂಧಪಟ್ಟಿರುವಂತಹ ಪಠ್ಯಪುಸ್ತಕಗಳನ್ನು ಸಹ ಮುದ್ರಣ ಮಾಡಿ ಕೊಟ್ಟಿದ್ದೇವೆ. ನಮ್ಮ ಸರ್ಕಾರದಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನಾವು ಕೊಡುತ್ತಿದ್ದೇವೆ. ಏಕೆಂದರೆ, ಮಕ್ಕಳಿಗೆ ಕೇವಲ ಭೌತಿಕ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ಮಾತ್ರ ಸಾಧ್ಯವಿಲ್ಲ. ಅವರು ಬರುವಂತಹ ದಿನದ ಜೀವನವನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಅವರಿಗೆ ದೈಹಿಕವಾದಂತಹ ಸಾಮರ್ಥ್ಯವನ್ನು ಸಹ ಹೆಚ್ಚಿಸಬೇಕಾದ ಅಗತ್ಯತೆ ಇದೆ ಎನ್ನುವುದರ ಹಿನ್ನೆಲೆಯಲ್ಲಿ, ದೈಹಿಕ ಶಿಕ್ಷಣಕ್ಕೆ ಡಾ: ಆನಂದ್ ನಾಡಗೇರ ಅವರು ಯಾವು ಪುಸ್ತಕಗಳನ್ನು ಬರೆದುಕೊಟ್ಟಿದ್ದರು, ಆ ಪುಸಕ್ತಗಳನ್ನು ಸಹ ಮುದ್ರಣ ಮಾಡಿ ಕಳೆದ ವರ್ಷ ಪ್ರಥಮ ಬಾರಿಗೆ ನಾವು ನಮ್ಮ ರಾಜ್ಯದಲ್ಲಿ ಕೊಟ್ಟಿದ್ದೇವೆ. ಆದರೆ, ಮುಖ್ಯವಾಗಿ ದೈಹಿಕ ಶಿಕ್ಷಕರು ಯಾರಿದ್ದಾರೋ ಅವರಿಗೆ promotion ಹಾಗೂ ಬೇರೆ ಬೇರೆ ಕೊರತೆಯಿದೆ ಎನ್ನುವಂತಹದ್ದು ಇದೆ. ಅದಕ್ಕೆ C&R Rule ನಲ್ಲಿ ಬದಲಾವಣೆ ಮಾಡಬೇಕು. C&R Ruleನಲ್ಲಿ ಬದಲಾವಣೆ ಮಾಡುವಂತಹ ಪ್ರಕ್ರಿಯೆ ಈಗ ಚಾಲನೆಯಲ್ಲಿದೆ. ಬರುವ ದಿನಗಳಲ್ಲಿ C&R Rule ನಲ್ಲಿ ನಾವು ಬದಲಾವಣೆಯನ್ನು ತಂದು ಅವರಿಗೆ promotion, ಇತ್ಯಾದಿ ಸೌಲಭ್ಯಗಳನ್ನು ಏನು ಕೊಡಬೇಕು ಅದನ್ನು ಕೊಡುವುದಕ್ಕೆ ಈಗಾಗಲೇ ನಾವು ಪ್ರಯತ್ನ ಮಾಡುತ್ತಿದ್ದೇವೆ. ಆ ಪ್ರಯತ್ನವನ್ನು ಮುಂದುವರೆಸುತ್ತೇವೆ.

ಶ್ರೀ ಕೆ. ಅಭಯಚಂದ್ರ ಜೈನ್: ಮಾನ್ಯ ಅಧ್ಯಕ್ಷರೆ, ಇವತ್ತು ದೈಹಿಕ ಶಿಕ್ಷಕರನ್ನು ನೇಮಕಾತಿ ಮಾಡುತ್ತಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಮತ್ತು

ಪ್ರೌಢಶಾಲೆಗಳಲ್ಲಿ ನೇಮಕಾತಿಯನ್ನು ಕೂಡ ಮಾಡುತ್ತಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರನ್ನು ಕಡ್ಡಾಯವಾಗಿ ನೇಮಕಾತಿ ಮಾಡಬೇಕೆಂದು ರೂಲ್ ಇದ್ದರೂ ಕೂಡ ಪ್ರಾಥಮಿಕ ಶಾಲೆಗಳಲ್ಲಿ ಇನ್ನೂ ಕೂಡ ದೈಹಿಕ ಶಿಕ್ಷಕರ ನೇಮಕಾತಿ ಆಗುತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಶಿಕ್ಷಕರು ಯಾರಿದ್ದಾರೋ ಅಂದರೆ ಸಂಗೀತ ಶಿಕ್ಷಕರು, ನಾಟಕ ಶಿಕ್ಷಕರು ಚಿತ್ರಕಲಾ ಶಿಕ್ಷಕರು ಹೀಗೆ ನಿರುದ್ಯೋಗಿ ಪದವೀಧರರಾಗಿರುವಂತಹವರು ಇದ್ದಾರೆ. ಅವರನ್ನು ನೇಮಕಾತಿ ಮಾಡಿಕೊಳ್ಳಬೇಕು ಎನ್ನುವ ಒಂದು ಬೇಡಿಕೆಯೂ ಸಹ ಇದೆ. ವಯೋಮಿತಿ ಆದಂತಹವರನ್ನು ಸಹ ದೈಹಿಕ ಶಿಕ್ಷಕರನ್ನಾಗಿ ನೇಮಕಾಗಿ ಮಾಡಿಕೊಳ್ಳಬೇಕು ಎನ್ನುವ ವಿಷಯವಿದೆ. ಆದರೆ, ಖಾಲಿ ಇರುವಂತಹ ಹುದ್ದೆಗಳನ್ನು ನಾವು ಈಗಾಗಲೇ ತುಂಬಿದ್ದೇವೆ. ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದೇವೆ. ಉಳಿದ ನಿರುದ್ಯೋಗಿಗಳಿಗೂ ಅವಕಾಶವಾಗುವುದಕ್ಕೆ ಇನ್ನೂ ಹೆಚ್ಚಿನ ದೈಹಿಕ ಶಿಕ್ಷಕರನ್ನು ಸಂಗೀತ ಶಿಕ್ಷಕರನ್ನು ಚಿತ್ರಕಲೆ ಶಿಕ್ಷಕರನ್ನು, ನಾಟಕ ಶಿಕ್ಷಕರನ್ನು ತೆಗೆದುಕೊಳ್ಳಲಿ ಎನ್ನುವಂತಹ ಬೇಡಿಕೆ ಇದೆ. ಆ ಬೇಡಿಕೆಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಕೆ. ಅಭಯಚಂದ್ರ ಜೈನ್: ಮಾನ್ಯ ಅಧ್ಯಕ್ಷರೆ, ದೈಹಿಕ ಶಿಕ್ಷಕರಿಗೂ ಹಾಗೂ ಸಂಗೀತ ಶಿಕ್ಷಕರಿಗೂ ಹೋಲಿಕೆ ಮಾಡುವುದು ಸರಿಯಲ್ಲ. ದೈಹಿಕ ಶಿಕ್ಷಕರನ್ನು ಕಡ್ಡಾಯವಾಗಿ ನೇಮಕಾತಿ ಮಾಡುವಂತಹ ಕೆಲಸ ಸರ್ಕಾರ ಮಾಡಬೇಕು.

ಅಧ್ಯಕ್ಷರು: ಯು.ಟಿ. ಖಾದರ್‌ರವರು ಪಿ.ಎಲ್.ಡಿ. ಬ್ಯಾಂಕ್ ಬಗ್ಗೆ ಪ್ರಶ್ನೆ ಕೇಳಿದ್ದೀರಿ.

ಇ) ವಿಷಯ: ರೈತರ ಜಮೀನನ್ನು ಹರಾಜು ಮಾಡಲು ಪಿ.ಎಲ್.ಡಿ. ಬ್ಯಾಂಕ್ ಕ್ರಮ ಕೈಗೊಂಡಿರುವ ಬಗ್ಗೆ